**ಒ.ಎಸ್ ನಂ.6785/2016**

ಪಿ.ಡಬ್ಲ್ಯೂ-1

ದಿನಾಂಕಃ03-12-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ವಕೀಲರಿಂದಃ**

ಪೊಲೀಸರು 1 ಮತ್ತು 2 ನೇ ಪ್ರತಿವಾದಿಯರ ವಿರುದ್ದ ಸಲ್ಲಿಸಿದ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯ ದಿ.26-10-2021 ರಂದು ರದ್ದು ಪಡಿಸಿರುತ್ತದೆ ಎಂದರೆ ಸರಿ. ನಾನು ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ನಮ್ಮ ಮತ್ತು 4 ನೇ ಪ್ರತಿವಾದಿಯ ನಡುವೆ ಇರುವ ಯಾವುದೇ ಪ್ರಕರಣಗಳ ಬಗ್ಗೆ ಉಲ್ಲೇಖಿಸಿಲ್ಲ ಎಂದರೆ ಸರಿ. ನಿಪಿ.1 ರಲ್ಲಿ ನಿಗಧಿತ ಸಮಯದ ಒಳಗೆ ಡೆವಲಪರ್ ಕಟ್ಟಡ ಕಟ್ಟ ಮುಗಿಸದೇ ಇದ್ದ ಪಕ್ಷದಲ್ಲಿ ಅವರು ನನಗೆ ಪ್ರತಿ ತಿಂಗಳು ರೂ. 2.00 ಲಕ್ಷ ಹಣ ಪರಿಹಾರವಾಗಿ ಕೊಡಬೇಕೆಂದು ಖಂಡಿಕೆ ಇರುತ್ತದೆ ಎಂದರೆ ಸರಿ. ಅದೇ ರೀತಿ ನಿಪಿ.1 ರಲ್ಲಿ ಯವೂದೇ ಕಾರಣಕ್ಕೂ ಏಕಪಕ್ಷೀಯವಾಗಿ ಆಗಿರುವ ಕರಾರು ರದ್ದಪಡಿಸಲು ಆಗುವುದಿಲ್ಲ ಎಂದು ಸ್ಪಷ್ಟ ಉಲ್ಲೇಖ ಇರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ನಾನು ಕರಾರನ್ನು ರದ್ದುಪಡಿಸಿಲ್ಲ ಎನ್ನುತ್ತಾರೆ. ಅದೇ ರೀತಿ ನಿಪಿ.1 ರಲ್ಲಿ ನಾನು ಡೆವಲಪರ್ ರವರಿಗೆ ಕೊಟ್ಟಿದ್ದ ಅಧಿಕಾರವನ್ನು ಸಹ ಏಕಪಕ್ಷೀಯವಾಗಿ ಆಗಿರುವ ಕರಾರು ರದ್ದುಪಡಿಸಲು ಆಗುವುದಿಲ್ಲ ಎಂದು ಉಲ್ಲೇಖ ಇದೆ ಎಂದರೆ ಸರಿ. ನಾನು ನಿಪಿ.1 ದಾಖಲೆ ಬರೆದುಕೊಟ್ಟಿರುವ ಸ್ವತ್ತಿನ ಮೇಲೆ ರಿಲಿಗೆ ಪೈನಾನ್ಸ್ ಕಂಪನಿಯಿಂದ ಸಾಲ ಪಡೆದಿರುತ್ತೇನೆ ಎಂದರೆ ಸರಿ. ನಾನು ದಾವಾಸ್ವತ್ತಿಗೆ ಸಂಬಂಧಿಸಿದ ಮೂಲ ದಾಖಲೆ ಪತ್ರಗಳನ್ನು ಸದರಿ ರಿಲಿಗೆ ಪೈನಾನ್ಸ್ ಕಂಪನಿಗೆ ಸಾಲದ ಹಣಕ್ಕಾಗಿ ಅಡ ಮಾಡಿರುತ್ತೇನೆ ಎಂದರೆ ಸರಿ. ನಿಪಿ.1 ದಾಖಲೆ ಬರೆಯುವ ಕಾಲಕ್ಕೆ ದಾವಾಸ್ವತ್ತಿನ ಮೇಲೆ ಸುಮಾರು ರೂ. ಆರು ವರೆ ಕೋಟಿ ಹಣ ಸಾಲ ಬಾಕಿ ಇತ್ತು. ಈ ಸಾಲದ ಹಣವನ್ನು ತೀರಿಸುವ ಸಂಪೂರ್ಣ ಜವಾಬ್ದಾರಿ ನನ್ನ ಮೇಲೆ ಇತ್ತು ಎಂದರೆ ಸರಿ. ನಿಪಿ.1 ರಲ್ಲಿ ನಾನು 4 ನೇ ಪ್ರತಿವಾದಿಗೆ ಕಟ್ಟಡ ಕಟ್ಟಿದ ನಂತರ ಅವರ ಭಾಗದ ಕಟ್ಟಡವನ್ನು ಮಾರಾಟ ಮಾಡಲು ಯಾವುದೇ ತೊಂದರೆ ಆಗದಂತೆ ರಿಲಿಗೆ ಪೈನಾನ್ಸ್ ಕಂಪನಿಯಿಂದ ಎನ್.ಒ.ಸಿ ಪಡೆದು ಕೊಡುವುದಾಗಿ ಒಪ್ಪಿಕೊಂಡು ಕರಾರಿನಲ್ಲಿ ಉಲ್ಲೇಖಿಸಿದ್ದೆ ಎಂದರೆ ಸರಿ.

ನಿಪಿ.1 ರಲ್ಲಿ ನಾನು ಪ್ರಾಜೆಕ್ಟ್ ಪ ೂರ್ಣಗೊಳ್ಳವ ಮೊದಲು ಅಥವಾ ನಾನು ನನ್ನ ಭಾಗದ ಪ್ಲಾಟ್ ಗಳನ್ನು ಮಾರಾಟ ಮಾಡಲುವ ಮೊದಲು ರಿಲಿಗೆ ಪೈನಾನ್ಸ್ ಕಂಪನಿಗೆ ಕೊಡಬೇಕಾಗಿರುವ ಪೂರ್ತಾ ಸಾಲದ ಹಣ ತೀಲುವಳಿ ಮಾಡಿ ಮೂಲ ದಾಖಲೆ ಪತ್ರಗಳನ್ನು ಹಿಂದಕ್ಕೆ ಪಡೆದು ಅದನ್ನು ಅಪಾರ್ಟಮೆಂಟ್ ಓನರ್ ಅಸೋಸಿಯೇಶನ್ ಗೆ ಹಸ್ತಾಂತರಿಸಲು ಬದ್ದನಾಗಿರುತ್ತೇನೆ ಎಂದು ಖಂಡಿಕೆ ಮಾಡಿದ್ದೆವು ಎಂದರೆ ಸಾಕ್ಷಿ ಮಾಡಿದ್ದು ಸರಿ ಆದರೆ ಇಲ್ಲಿಯತನಕ ಪ್ರಾಜೆಕ್ಟ್ ಮುಕ್ತಾಯಗೊಂಡಿಲ್ಲ, ಹಾಗಾಗಿ ನನ್ನ ಭಾಗದ ಪ್ಲಾಟ್ ಗಳನ್ನು ಮಾರಾಟ ಮಾಡಿಲ್ಲ ಎನ್ನುತ್ತಾರೆ. ನಾನು ಪ್ಲಾಟ್ ನಂ. 103 ನ್ನು ಕೃಷ್ಣಮೂರ್ತಿ ಚಂದ್ರಶೇಖರ್ ರವರಿಗೆ ದಿ 13-04-2016 ರಂದು ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸದರಿ ಕ್ರಯಪತ್ರದಲ್ಲಿ ನಾನು ಕಟ್ಟಡ ಈಗಾಗಲೇ ಕಟ್ಟಿ ಪೂರ್ಣಗೊಂಡಿದೆ ಹಾಗಾಗಿ ನಾನು ಪ್ಲಾಟಿನ ಸ್ವಾಧೀನವನ್ನು ಖರೀದಿದಾರರಿಗೆ ಹಸ್ತಾಂತರಿಸುತ್ತಿದ್ದೇನೆ ಎಂದು ಉಲ್ಲೇಖಿಸಿರುತ್ತೇನೆ ಎಂದರೆ ಸಾಕ್ಷಿ ಬರೆಯಿಸಿರುವುದು ಸರಿ, ಸಾಕ್ಷಿ ಮುಂದುವರಿದು ನಾನು ಖರೀದಿದಾರರಿಗೆ ಖಂಡಿಕೆ ಹಾಕಿ ಬರೆಯಿಸಿರುತ್ತೇನೆ ಎನ್ನುತ್ತಾರೆ. ಅದೇ ರೀತಿ ನಾನು ಪ್ಲಾಟ್ ನಂ. 102 ನ್ನು ಜಯಂತಿ ರವರಿಗೆ ದಿ 28-09-2019 ರಂದು ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸದರಿ ಕ್ರಯಪತ್ರದಲ್ಲಿ ನಾನು ಕಟ್ಟಡ ಈಗಾಗಲೇ ಕಟ್ಟಿ ಪೂರ್ಣಗೊಂಡಿದೆ, ಹಾಗಾಗಿ ನಾನು ಪ್ಲಾಟಿನ ಸ್ವಾಧೀನವನ್ನು ಖರೀದಿದಾರರಿಗೆ ಹಸ್ತಾಂತರಿಸುತ್ತಿದ್ದೇನೆ ಎಂದು ಉಲ್ಲೇಖಿಸಿರುತ್ತೇನೆ ಎಂದರೆ ಸಾಕ್ಷಿ ಬರೆಯಿಸಿರುವುದು ಸರಿ, ಸಾಕ್ಷಿ ಮುಂದುವರಿದು ನಾನು ಖರೀದಿದಾರರಿಗೆ ಖಂಡಿಕೆ ಹಾಕಿ ಬರೆಯಿಸಿರುತ್ತೇನೆ ಎನ್ನುತ್ತಾರೆ. ನಾನು ಇಲ್ಲಿಯತನಕ ರಿಲಿಗೆ ಪೈನಾನ್ಸ್ ಕಂಪನಿಯಿಂದ ಎನ್.ಒ. ಸಿ ಪಡೆದುಕೊಂಡಿಲ್ಲ. ನಾನು ನಿಪಿ.1 ರ ಖಂಡಿಕೆ ಪ್ರಕಾರ ಇಲ್ಲಿಯ ತನಕ ರಿಲಿಗೆ ಪೈನಾನ್ಸ್ ಕಂಪನಿಗೆ ಸಾಲ ಕಟ್ಟಿ ಪೂರ್ತಾ ತೀರುವಳಿ ಮಾಡಿಲ್ಲ. ಸಾಕ್ಷಿ ಪುನಃ ನಾನು ಪೂರ್ತಾ ಸಾಲ ತೀರುವಳಿ ಮಾಡಿರುತ್ತೇನೆ, ಆದರೆ ನಿಖರವಾಗಿ ಯಾವಾಗ ತೀರುವಳಿ ಮಾಡಿರುತ್ತೇನೆ ಎಂದು ದಾಖಲೆ ನೋಡದೇ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಈ ರೀತಿ ಸಾಲ ತೀರುವಳಿ ಆದ ಸಂಬಂಧ ನನಗೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ.

ನಿಪಿ.1 ದಾಖಲೆ ಬರೆಯುವವರೆಗೂ ನನ್ನ ಹೆಸರಿಗೆ ಬಿ.ಡಿ.ಎ ಪ್ರಾಧಿಕಾರದಿಂದ ನಿವೇಶನ ಸಂ.991 ಕ್ಕೆ ಸಂಬಂಧಿಸಿದಂತೆ ಕ್ರಯಪತ್ರ ಆಗಿರಲಿಲ್ಲ ಎಂದರೆ ಸರಿ. ನಿಪಿ.1 ರಲ್ಲಿ ನಾನು 3 ತಿಂಗಳ ಒಳಗಾಗಿ ನಿವೇಶನ ಸಂ. 991 ಕ್ಕೆ ಬಿ.ಡಿ.ಎ ಪ್ರಾಧಿಕಾರದದಿಂದ ಕ್ರಯಪತ್ರ ಪಡೆದುಕೊಳ್ಳುತ್ತೇನೆ ಎಂದು ಒಪ್ಪಿಕೊಂಡಿದ್ದೆ ಎಂದರೆ ಸರಿ. ನನಗೆ ಇಲ್ಲಿಯ ತನಕ ಬಿ.ಡಿ.ಎ ಪ್ರಾಧಿಕಾರದಿಂದ ಕ್ರಯಪತ್ರ ಸದರಿ ಈ ನಿವೇಶನಕ್ಕೆ ಸಂಬಂಧಿಸಿದಂತೆ ಆಗಿಲ್ಲ. ನಿಪಿ.1 ರಲ್ಲಿ ಡೆವಲಪರ್ ರವರ ನಾಮಿನಿ ಹೆಸರಿಗೆ ದಾವಾ ಎ ಶೆಡ್ಯೂಲ್ ಸ್ವತ್ತಿಗೆ ಅಧಿಕಾರಪತ್ರ ಬರೆದುಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದೆ ಎಂದರೆ ಸರಿ. ನಿಪಿ.2 ಅಧಿಕಾರಪತ್ರವನ್ನು ನಾನು ರಮಣ್ ಲಾಲ್ ಶಾ ಎಂಬುವವರ ಹೆಸರಿಗೆ ಬರೆದುಕೊಡುತ್ತಿದ್ದೇನೆ ಎಂದು ದಾಖಲೆಯಲ್ಲಿ ಬರೆದಿರುವ ಒಕ್ಕಣೆಗಳನ್ನು ಒಪ್ಪಿ ದಾಖಲೆ ಬರೆದುಕೊಟ್ಟಿದ್ದೆ ಎಂದರೆ ಸರಿ. ನಿಪಿ.2 ರಲ್ಲಿ ಡೆವಲಪರ್ ರವರಿಗೆ ಅವರ ಭಾಗದ ಪ್ಲಾಟ್ ನ್ನು ಮಾರಾಟ ಮಾಡಿಕೊಳ್ಳಲು ಅಧಿಕಾರ ಕೊಟ್ಟಿರುತ್ತೇನೆ ಎಂದು ಉಲ್ಲೇಖಿಸಿರುತ್ತೇನೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಅವರು ನನ್ನ ಭಾಗದ ಪ್ಲಾಟ್ ಗಳನ್ನು ನನಗೆ ಹಸ್ತಾಂತರಿಸಿದ ನಂತರ ತಮ್ಮ ಭಾಗದ ಪ್ಲಾಟ್‌ನ್ನು ಮಾರಾಟ ಮಾಡಿಕೊಳ್ಳಬಹುದಿತ್ತು ಎನ್ನುತ್ತಾರೆ. ನಾನು ಫೆಬ್ರವರಿ- 2016 ರಲ್ಲಿ ನನ್ನ ಭಾಗದ ಪ್ಲಾಟುಗಳ ಸ್ವಾಧೀನ ಪಡೆದುಕೊಂಡಿರುತ್ತೇನೆ. ನಾನು ಆರ್ಬಿಟ್ರೇಶನ್ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ಸಾಕ್ಷ್ಯ ನುಡಿಯುವ ಕಾಲಕ್ಕೆ ಫೆಬ್ರವರಿ- 2015 ರಲ್ಲಿ ನನ್ನ ಭಾಗದ ಪ್ಲಾಟುಗಳ ಸ್ವಾಧೀನ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದೆ ಎಂದರೆ ಸಾಕ್ಷಿ ಅದು ಬೆರಳಚ್ಚು ತಪ್ಪಿನಿಂದ ಇಸವಿ ತಪ್ಪಾಗಿದೆ ಎನ್ನುತ್ತಾರೆ. ನಾನು ಆರ್ಬಿಟ್ರೇಶನ್ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ನನ್ನ ಸಾಕ್ಷ್ಯ ವಿಚಾರಣೆಯಲ್ಲಿ ಇಸವಿ ಬೆರಳಚ್ಚುಗಾರರ ತಪ್ಪಿನಿಂದ ತಪ್ಪಾಗಿರುತ್ತದೆ ಎಂದು ತಿದ್ದುಪಡಿ ಮಾಡಿಸಿಕೊಳ್ಳಲು ಪ್ರಯತ್ನಿಸಿಲ್ಲ. ನಾನು 3 ನೇ ಪ್ರತಿವಾದಿಯಿಂದ ನಿಪಿ.3 ರ ಅಡಿಯಲ್ಲಿ ರೂ. 75.00 ಲಕ್ಷ ಹಣವನ್ನು ರೀ-ಫಂಡೆಬಲ್ ಡಿಪಾಸಿಟ್ ಆಗಿ ಪಡೆದುಕೊಂಡಿದ್ದೆ ಎಂದರೆ ಸರಿ. ನಿಪಿ.1 ರಲ್ಲಿ ಸದರಿ ಹಣವನ್ನು ನನ್ನ ಭಾಗದ ಪ್ಲಾಟ್ ಗಳನ್ನು ನನ್ನ ವಶಕ್ಕೆ ಪಡೆದುಕೊಂಡ ನಂತರ ಅದನ್ನು 4 ನೇ ಪ್ರತಿವಾದಿಗೆ ಕೂಡಲೇ ಹಿಂದಿರುಗಿಸುವುದು ಎಂದು ಉಲ್ಲೇಖ ಇದೆ ಎಂದರೆ ಸರಿ.

ನನ್ನ ಮತ್ತು 4 ನೇ ಪ್ರತಿವಾದಿ ನಡುವೆ ನಿಪಿ.3 ರಂತೆ ಶೇರಿಂಗ್ ಅಗ್ರಿಮೆಂಟ್ ದಿ.27-01-2014 ರಂದು ಆಗಿರುತ್ತದೆ ಎಂದರೆ ಸರಿ. ನಿಪಿ.3 ದಾಖಲೆ ಆಗುವ ಕಾಲಕ್ಕೆ ಕಟ್ಟಡ ಕಾಮಗಾರಿ ಇನ್ನೂ ಪಾಯದ ಹಂತದಲ್ಲಿ ಇತ್ತು. ನಿಪಿ.3 ದಾಖಲೆ ಕಟ್ಟಡದಲ್ಲಿ ಕಟ್ಟಬಹುದಾಗಿರುವ ಪ್ಲಾಟ್ ಗಳನ್ನು ಹಂಚಿಕೊಳ್ಳುವ ಸಂಬಂಧ ಆಗಿರುವ ಕರಾರು ಎಂದರೆ ಸರಿ. ನಿಪಿ.3 ರಲ್ಲಿ ಶೆಡ್ಯೂಲ್ ಬಿ ಎಂದು ತೋರಿಸಿರುವ ಪ್ಲಾಟುಗಳು ಡೆವಲಪರ್ ಭಾಗಕ್ಕೆ ಕೊಟ್ಟಿರುವ ಪ್ಲಾಟ್ ಗಳು ಎಂದರೆ ಸರಿ. ನಾನು ಈ ನ್ಯಾಯಾಲಯದ ಮುಂದೆ ದಾಖಲಿಸಿರುವ 5 ದಾವೆಗಳಲ್ಲಿ ತೋರಿಸಿರುವ ಬಿ ಶೆಡೂಲ್ ಆಸ್ತಿಗಳು ಡೆವಲಪರ್ ಭಾಗಕ್ಕೆ ನಿಪಿ.3 ದಾಖಲೆಯ ಅಡಿಯಲ್ಲಿ ಕೊಟ್ಟಿರುವ ಪ್ಲಾಟ್ ಗಳು ಎಂದರೆ ಸರಿ. 4 ನೇ ಪ್ರತಿವಾದಿ ಬಿ.ಬಿ.ಎಂ.ಪಿ ಇಂದ ಪಡೆದುಕೊಂಡಿದ್ದ ಕಟ್ಟಡ ಪರವಾನಿಗೆ ಮತ್ತು ಅನುಮೋದಿತ ನಕ್ಷೆಯನ್ನು ನಾನು ನೋಡಿದ್ದೆ. ನಿಪಿ.3 ರಲ್ಲಿ ನಾವು ಹಂಚಿಕೊಂಡಿರುವ 4 ನೇ ಹಂತದಲ್ಲಿರುವ ಪ್ಲಾಟುಗಳು ಅನುಮೋದಿತ ನಕ್ಷೆ ಮತ್ತು ಪರವಾನಿಗೆಯಲ್ಲಿ ತೋರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು 4 ನೇ ಪ್ರತಿವಾದಿ ತಾನು ಟಿ.ಡಿ.ಆರ್ ಪಡೆದುಕೊಂಡು ನಂತರ ಪ್ಲಾಟ್ ಗಳನ್ನು ಕಟ್ಟುತ್ತೇನೆ ಎಂದು ಒಪ್ಪಿದ್ದರು ಎನ್ನುತ್ತಾರೆ. ಟಿ.ಡಿ.ಆರ್ ಪಡೆದುಕೊಳ್ಳುವ ಬಗ್ಗೆ ನಿಪಿ.1 ದಾಖಲೆಯಲ್ಲಿ ಆಗಲೀ ಅಥವಾ ನಿಪಿ.3 ದಾಖಲೆಯಲ್ಲಿ ಆಗಲೀ ಉಲ್ಲೇಖಿಸಿಲ್ಲ. ನಾನು ಮತ್ತು 4 ನೇ ಪ್ರತಿವಾದಿ ಪರಸ್ಪರ ಒಪ್ಪಿ ಮಾತುಕತೆ ಮಾಡಿಕೊಂಡು ಕಟ್ಟಡದ 4 ನೇ ಮಹಡಿಯನ್ನು ಕಟ್ಟಿರುತ್ತೇವೆ ಎಂದರೆ ಸರಿಯಲ್ಲ.

ನಿಪಿ.1 ರಲ್ಲಿ ಸ್ವಾಧೀನತಾ ಪತ್ರ ಪಡೆದುಕೊಳ್ಳುವ ಬಗ್ಗೆ ಉಲ್ಲೇಖ ಇದೆ. ನಿಪಿ.1 ರಲ್ಲಿ 4 ನೇ ಪ್ರತಿವಾದಿ ಸ್ವಾಧೀನತಾ ಪತ್ರ ಪಡೆದುಕೊಂಡ ನಂತರವಷ್ಟೇ ನನ್ನ ಭಾಗದ ಪ್ಲಾಟ್ ಗಳನ್ನು ನನಗೆ ಕೊಡಬೇಕೆಂದು ಉಲ್ಲೇಖ ಇಲ್ಲ. ನಾನು ಆರ್ಬಿಟ್ರೇಶನ್ ಪ್ರಕರಣದಲ್ಲಿ ನ್ಯಾಯಾಲಯಕ್ಕೆ 4 ನೇ ಪ್ರತಿವಾದಿ ಸ್ವಾಧೀನತಾ ಪತ್ರವನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದುಕೊಂಡು ತಂದು ಹಾಜರುಪಡಿಸುವಂತೆ ನಿರ್ದೇಶನ ನೀಡಬೇಕು ಎಂದು ಕೇಳಿಕೊಂಡಿದ್ದೆ ಎಂದರೆ ಸರಿ. ನಾನು ಈ ರೀತಿ ಆರ್ಬಿಟ್ರೇಶನ್ ಪ್ರಕರಣದಲ್ಲಿ ಕೇಳಿಕೊಂಡಿದ್ದ ಕೋರಿಕೆಯನ್ನು ನ್ಯಾಯಾಲಯ ತಿರಸ್ಕರಿಸಿರುತ್ತದೆ ಎಂದರೆ ಸಾಕ್ಷಿ ಅದರ ವಿರುದ್ದ ಅಪೀಲು ಸಲ್ಲಿಸಿರುತ್ತೇನೆ ಎನುನತ್ತಾರೆ. ನಾನು ಸಲ್ಲಿಸಿದ್ದ ಅಪೀಲು ಈಗಾಗಲೇ ವಜಾ ಆಗಿರುತ್ತದೆ ಎಂದರೆ ಸಾಕ್ಷಿ ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಅಪೀಲು ದಾಖಲಿಸಿರುತ್ತೇನೆ

ಎನ್ನುತ್ತಾರೆ.

ನನ್ನ ಸಾಕ್ಷ್ಯಪ್ರಮಾಣಪತ್ರದಲ್ಲಿ ಉಲ್ಲೇಖಿಸಿರುವ ನಳಿನಿ ವಿಶ್ವನಾಥ್ ಎಂಬುವವರಿಗೆ ಕ್ರಯಪತ್ರವನ್ನು 2 ನೇ ಪ್ರತಿವಾದಿ ಬರೆದುಕೊಟ್ಟಿರುತ್ತಾರೆ. ಸದರಿ ನಳಿನಿ ವಿಶ್ವನಾಥ್ ನನ್ನ ಮಗಳು ಎಂದರೆ ಸರಿ. ಕ್ರಯಪತ್ರವನ್ನು ನನ್ನ ಹೆಂಡತಿ ಸಾವಿತ್ರಿ ವಿಶ್ವನಾಥ್ ರವರು ನಳಿನಿ ವಿಶ್ವನಾಥ್ ರವರಿಂದ ಅಧಿಕಾರಪತ್ರದ ಆಧಾರದ ಮೇಲೆ ತನ್ನ ಹೆಸರಿಗೆ ಕ್ರಯಪತ್ರ ಬರೆಯಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರಕ್ಕೆ ನಾನೂ ಸಹ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಪ್ಲಾಟ್ ನಂ. 209 ನ್ನು ನನ್ನ ಅಳಿಯ ಹೆರಂಜನ್ ಶ್ರೇಯಸ್ ಉದಯಶಂಕರ್ ರವರು ಕ್ರಯಪತ್ರದ ಮೂಲಕ ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ಈ ಕ್ರಯಪತ್ರವನ್ನು ಸಹ 4 ನೇ ಪ್ರತಿವಾದಿಯ ಪರವಾಗಿ 2 ನೇ ಪ್ರತಿವಾದಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಈ ಕ್ರಯಪತ್ರಕ್ಕೂ ಸಹ ನನ್ನ ಹೆಂಡತಿ ಅಧಿಕಾರಪತ್ರದ ಆಧಾರದ ಮೇಲೆ ತನ್ನ ಹೆಸರಿಗೆ ಕ್ರಯಪತ್ರ ಬರೆಯಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಈ ಕ್ರಯಪತ್ರಕ್ಕೂ ನಾನೂ ಸಹ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಈ 2 ಕ್ರಯಪತ್ರಗಳನ್ನು ಬರೆಯಿಸಿಕೊಳ್ಳುವ ಕಾಲಕ್ಕೆ ತಾನು ಅಧಿಕಾರಪತ್ರವನ್ನು ರಮಣ್ ಲಾಲ್ ಶಾ ರವರಿಗೆ ಕೊಟ್ಟಿರುವ ಕಾರಣ 2 ನೇ ಪ್ರತಿವಾದಿ 4 ನೇ ಪ್ರತಿವಾದಿಯ ಪರವಾಗಿ ಕ್ರಯಪತ್ರ ಬರೆದುಕೊಡಲು ಹಕ್ಕು ಇಲ್ಲ ಎಂದು ತಕರಾರು ಸಲ್ಲಿಸಿಲ್ಲ.

ನಾನು ಪ್ಲಾಟ್ ನಂ.202 ಮತ್ತು 203 ಕ್ಕೆ ಸಂಬಂಧಿಸಿದಂತೆ ಆಗಿರುವ ಕ್ರಯಪತ್ರಗಳನ್ನು ಹೊರತುಪಡಿಸಿ ಉಳಿದಂತೆ 4 ನೇ ಪ್ರತಿವಾದಿ ಬರೆದುಕೊಟ್ಟಿರುವ ಕ್ರಯಪತ್ರಗಳನ್ನು ಪ್ರಶ್ನಿಸಿ ಪ್ರತ್ಯೇಕ ದಾವೆಗಳನ್ನು ಹೂಡಿರುತ್ತೇನೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ಇಶ್ರತ್ ಜಹಾನ್ ಆರಾ)

**III ನೇ ಎ.ಸಿ.ಸಿ & ಎಸ್.ಜೆ, ಬೆಂಗಳೂರು.**